# ದಿಗ್ಗಜರ ಸಾಧನೆ ಮೀರಿನಿಂತ ಮೆಸ್ಸಿ

ಯುರೋಪಿನ ಬಾರ್ಸಿಲೋನಾ ಫುಟ್‌ಬಾಲ್ ಕ್ಲಬ್‌ನ ಮುಂಚೂಣಿ ಆಟಗಾರ ಲಿಯೊನೆಲ್ ಮೆಸ್ಸಿ ಕಳೆದ ವಾರವಷ್ಟೇ ವಿಶಿಷ್ಟ ಸಾಧನೆಯೊಂದರ ಮೂಲಕ ಕ್ರೀಡಾ ಜಗತ್ತಿನ ಗಮನ ಸೆಳೆದರು. ಕ್ಲಬ್‌ವೊಂದರ ಪರವಾಗಿ ಅತ್ಯಧಿಕ ಗೋಲುಗಳನ್ನು (643) ಗಳಿಸಿದ ಪೀಲೆ ಸಾಧನೆಯನ್ನು ಅವರು ಸರಿಗಟ್ಟಿದರು. ಕಾಕತಾಳೀಯ ಅಂದರೆ ಪೀಲೆ ಕೂಡ ಈ ಸಾಧನೆ ಮಾಡಿದ್ದು ಬಾರ್ಸಿಲೋನಾ ಕ್ಲಬ್ ಪರವಾಗಿಯೇ. ಸ್ಪ್ಯಾನಿಷ್ ಲೀಗ್‌ನಲ್ಲಿ ಈಗ ಅತ್ಯಧಿಕ ಗೋಲುಗಳನ್ನು ಹೊಂದಿದ ಖ್ಯಾತಿ ಮೆಸ್ಸಿ ಅವರದಾಗಿದೆ.

ಅರ್ಜೆಂಟೀನಾದ ಫುಟ್‌ಬಾಲ್ ದಿಗ್ಗಜರಲ್ಲಿ ಡಿಯೆಗೊ ಮರಡೋನಾ ಅವರ ನಂತರದಲ್ಲಿ ನಿಲ್ಲುವ ಹೆಸರು ಮೆಸ್ಸಿ ಅವರದು. ಮರಡೋನಾ ತೀರಿದ ಮೂರೇ ವಾರಗಳಲ್ಲಿ ಈ ಸಾಧನೆಯನ್ನು ಮಾಡುವ ಮೂಲಕ ತಮ್ಮ ದೇಶದ ಮಹಾನ್ ಕ್ರೀಡಾತಾರೆಗೆ ಶ್ರದ್ಧಾಂಜಲಿ ಅರ್ಪಿಸಿದ್ದಾರೆ ಮೆಸ್ಸಿ.

ಯುರೋಪ್‌ನ ಅಗ್ರಶ್ರೇಣಿಯ ಲೀಗ್‌ಗಳಲ್ಲಿ ದಿಗ್ಗಜರ ಸಾಧನೆಯನ್ನು ಮೆಸ್ಸಿ ಮೀರಿ ನಿಲ್ಲುತ್ತಿರುವುದು ಇದೇ ಮೊದಲೇನಲ್ಲ. ಅತ್ಯಧಿಕ ಗೋಲು (365) ಹೊಂದಿದ ಗೆರ್ಡ್ ಮ್ಯುಲರ್ ಅವರ ದಾಖಲೆಯನ್ನು 2018ರ ಜನವರಿಯಲ್ಲಿ ಅವರು ಅಳಿಸಿ ಹಾಕಿದ್ದರು. ಒಂದೇ ವರ್ಷದಲ್ಲಿ ಅತ್ಯಧಿಕ ಗೋಲು ದಾಖಲಿಸಿದ (86) ಗೆರ್ಡ್ ಅವರ ಸಾಧನೆಯನ್ನು ಅವರು 2012ರಲ್ಲೇ ಮೀರಿ ನಿಂತಿದ್ದರು.

33ರ ಹರೆಯದ ಮೆಸ್ಸಿ 2005ರಿಂದಲೂ ಬಾರ್ಸಿಲೋನಾ ಕ್ಲಬ್ ಪರವಾಗಿ ಆಡುತ್ತಿದ್ದಾರೆ. 2020ರ ಸಾಲಿನಲ್ಲಿ ಅವರು ಪಡೆದ ಸಂಬಳ ಬರೋಬ್ಬರಿ 255 ಕೋಟಿ ರೂಪಾಯಿ. ಒಂದೆಡೆ ಮೆಸ್ಸಿ, ಸಾಧನೆಯ ಮೇಲೆ ಸಾಧನೆ ಮಾಡುತ್ತಾ, ಹೊಸ ಮೈಲಿಗಲ್ಲುಗಳನ್ನು ಸ್ಥಾಪಿಸುತ್ತಾ ಹೊರಟಿದ್ದರೂ ಇನ್ನೊಂದೆಡೆ ಬಾರ್ಸಿಲೋನಾ ಕ್ಲಬ್ ದುರ್ಬಲಗೊಳ್ಳುತ್ತಿರುವುದು ಅವರಲ್ಲಿ ಅಸಮಾಧಾನ ಮೂಡಿಸಿದೆ. ಹೀಗಾಗಿ ಕಳೆದ ಹದಿನೈದು ವರ್ಷಗಳಿಂದ ತಾವು ಪ್ರತಿನಿಧಿಸುತ್ತಾ ಬಂದಿರುವ ಕ್ಲಬ್‌ನಿಂದ ದೂರವಾಗುವ ಮಾತುಗಳನ್ನೂ ಅವರು ಆಡಿದ್ದಾರೆ. ತಮ್ಮ ಕ್ಲಬ್‌ಗೆ ದಾಖಲೆಯ 33 ಟ್ರೋಫಿಗಳನ್ನು ಅವರು ಗೆದ್ದು ಕೊಟ್ಟಿದ್ದಾರೆ.

ತಮ್ಮ ಸಾಧನೆಯನ್ನು ಮೆಸ್ಸಿ ಸರಿಗಟ್ಟಿದ ಸುದ್ದಿ ತಿಳಿಯುತ್ತಿದ್ದಂತೆಯೇ ಪೀಲೆ ತುಂಬು ಹೃದಯದಿಂದ ಅವರನ್ನು ಅಭಿನಂದಿಸಿದ್ದಾರೆ.

‘ನಿಮ್ಮ ಆಟವನ್ನು ನಾನು ಇಷ್ಟಪಟ್ಟಿದ್ದೇನೆ. ಅದೇ (ಬಾರ್ಸಿಲೋನಾ ಕ್ಲಬ್) ಜರ್ಸಿಯನ್ನು ನಿರಂತರವಾಗಿ ಧರಿಸುವುದರ ಆನಂದ ಏನೆಂಬುದನ್ನು ನಾನು ಬಲ್ಲೆ. ನಿಮ್ಮ ಐತಿಹಾಸಿಕ ಸಾಧನೆಗಾಗಿ ನಿಮಗೆ ಅಭಿನಂದನೆಗಳು. ಆದರೆ, ದುರದೃಷ್ಟವಶಾತ್ ಫುಟ್‌ಬಾಲ್ ಅಂಗಳದಲ್ಲಿ ಇಂತಹ ಯಶೋಗಾಥೆಗಳ ಸಂಖ್ಯೆ ತುಂಬಾ ಕಡಿಮೆ ಆಗುತ್ತಿದೆ’ ಎಂದಿದ್ದಾರೆ ಬ್ರೆಜಿಲ್‌ನ ಫುಟ್‌ಬಾಲ್ ತಾರೆ ಪೀಲೆ. ಅಂದಹಾಗೆ, ಮೆಸ್ಸಿ ಅವರ ಈ ಗೋಲು ಗಳಿಕೆ 748 ಪಂದ್ಯಗಳಲ್ಲಾದರೆ, ಪೀಲೆ ಅವರು ಆ ಸಾಧನೆಗೆ ತೆಗೆದುಕೊಂಡಿದ್ದು 757 ಪಂದ್ಯಗಳನ್ನು.

ಫುಟ್‌ಬಾಲ್ ಜಗತ್ತಿನಲ್ಲಿ ಹೊಸತಾರೆಗಳ ಉಗಮದ ಕುರಿತು ಕಳೆದ ಮಾರ್ಚ್‌ನಲ್ಲಿ ಪತ್ರಕರ್ತರು ಪೀಲೆ ಅವರ ಮುಂದೆ ‘ಯಾರು ಮಹಾನ್’ ಎಂಬ ಪ್ರಶ್ನೆಯೊಂದನ್ನು ಮುಂದಿಟ್ಟಿದ್ದರು. ‘ಸಂಶಯವೇ ಇಲ್ಲ. ಆ ಮಹಾನ್ ಆಟಗಾರ ಒಬ್ಬನೇ. ಈಗಲೂ, ಮುಂದೆಯೂ. ರಾಜಕುಮಾರರು ತುಂಬಾ ಜನ ಇರಬಹುದು. ಆದರೆ, ರಾಜನಿರುವುದು ಒಬ್ಬನೇ’ ಎಂದು ಮರಡೋನಾ ಅವರನ್ನು ಕೊಂಡಾಡಿದ್ದರು.



ಅರ್ಜೆಂಟೀನಾ ರಾಷ್ಟ್ರೀಯ ತಂಡದ ನಾಯಕರೂ ಆಗಿರುವ ಮೆಸ್ಸಿ, ಫುಟ್‌ಬಾಲ್ ಜಗತ್ತಿನ ಸರ್ವಕಾಲಿಕ ಶ್ರೇಷ್ಠ ಆಟಗಾರರಲ್ಲಿ ಒಬ್ಬರೆನಿಸಿದ್ದಾರೆ. ಯುರೋಪಿಯನ್ ಲೀಗ್‌ನಲ್ಲಿ ದಾಖಲೆಯ ಆರು ಚಿನ್ನದ ಬೂಟುಗಳನ್ನು ಪಡೆದ ಹಿರಿಮೆಯೂ ಅವರದಾಗಿದೆ.

ಮೆಸ್ಸಿ ಪುಟ್ಟ ಬಾಲಕನಾಗಿದ್ದಾಗ ಅವರದು ಅರ್ಜೆಂಟೀನಾದ ಮಧ್ಯಮ ವರ್ಗದ ಕುಟುಂಬವಾಗಿತ್ತು. ಸ್ಟೀಲ್ ಫ್ಯಾಕ್ಟರಿಯೊಂದರ ಮ್ಯಾನೇಜರ್ ಆಗಿದ್ದ ಅವರ ತಂದೆ ಜಾರ್ಜ್ ಕೂಡ ಫುಟ್‌ಬಾಲ್ ಪ್ರೇಮಿ. ಮೆಸ್ಸಿ ಹದಿಮೂರು ವರ್ಷದ ಬಾಲಕನಿದ್ದಾಗ ಫುಟ್‌ಬಾಲ್‌ನಲ್ಲಿ ಭವಿಷ್ಯ ಅರಿಸಿ ಅರ್ಜೆಂಟೀನಾದಿಂದ ಸ್ಪೇನ್‌ಗೆ ಸ್ಥಳಾಂತರಗೊಂಡರು. ಆಗ ಅವರ ಕೈಹಿಡಿದಿದ್ದೇ ಬಾರ್ಸಿಲೋನಾ ಕ್ಲಬ್. ಆ ನಂಟು ಇಂದಿನವರೆಗೂ ಮುಂದುವರಿದುಕೊಂಡು ಬಂದಿದೆ.

ಮೆಸ್ಸಿ ಕಾಲದ ಮತ್ತೊಬ್ಬ ಮಹಾನ್ ಆಟಗಾರ ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ. ಇಬ್ಬರ ನಡುವಿನ ಸ್ಪರ್ಧೆ ಅಭಿಮಾನಿಗಳಲ್ಲಿ ಪುಳಕ ಮೂಡಿಸಿದ್ದು ಸುಳ್ಳಲ್ಲ. ಇಬ್ಬರೂ ಬಹುದೊಡ್ಡ ಸಾಧಕರು. ಆದರೆ, ಫುಟ್‌ಬಾಲ್ ಪಂಡಿತರು ಅವರಿಬ್ಬರನ್ನೂ ಆಗಾಗ ಹೋಲಿಕೆ ಮಾಡಿ ನೋಡುವುದಿದೆ. ಅವರಿಬ್ಬರ ಪ್ರಾಬಲ್ಯ, ದೌರ್ಬಲ್ಯಗಳನ್ನು ಅಳೆದು–ಸುರಿದು ಲೆಕ್ಕ ಹಾಕುವುದೂ ಇದೆ.

ಮೆಸ್ಸಿ ಬಾರ್ಸಿಲೋನಾ ಕ್ಲಬ್ ಪ್ರತಿನಿಧಿಸಿದರೆ, ರೊನಾಲ್ಡೊ ರಿಯಲ್ ಮ್ಯಾಡ್ರಿಡ್ ತಂಡದ ಪರ ಆಡಿದವರು. ಮೆಸ್ಸಿ, ಅಡಿದಾಸ್‌ಗೆ ರಾಯಭಾರಿಯಾದರೆ, ರೊನಾಲ್ಡೊ, ನೈಕ್ ಬ್ರ್ಯಾಂಡ್ ಜಾಹೀರಾತಿನಲ್ಲಿ ಕಾಣಿಸಿಕೊಂಡವರು. ಗಳಿಕೆಯಲ್ಲಿ ಇಬ್ಬರೂ ಮುಂಚೂಣಿಯಲ್ಲಿ ಇರುವವರು. ಅಂಗಳದಲ್ಲಿ ಅವರಿಬ್ಬರ ಆಟ ನೋಡುವುದೇ ಒಂದು ಚೆಂದ. ಮೆಸ್ಸಿಯಿಂದ ಇನ್ನೆಷ್ಟು ದಾಖಲೆಗಳಿಗೆ ಸಂಚಕಾರ ಕಾದಿದೆಯೋ?

■ ಪ್ರವೀಣ ಕುಲಕರ್ಣಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65